ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಎಸಿ2(ಎಸ್)/07/2024-25

ದಿನಾಂಕ: 11.07.2025

## ಸುತ್ತೋಲೆ

ವಿಷಯ: 2025-26ನೇ ಶೈಕ್ಷಣಿಕ ವರ್ಷದ ಸ್ನಾತಕ ಪದವಿಯ ಕಾರ್ಯಕ್ರಮದ ಮೂರು ಪ್ರಮುಖ ವಿಷಯಗಳಿಂದ ಐಚ್ಛಿಕ ಪತ್ರಿಕೆಗಳು/ಕೋರ್ಸ್‌ಗಳನ್ನು ತೆಗೆದುಕೊಳ್ಳುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ (ವಿಶ್ವವಿದ್ಯಾನಿಲಯಗಳು) ಆದೇಶ ಸಂಖ್ಯೆ: ಇಡಿ 166 ಯುಎನ್‌ಇ 2023, ಬೆಂಗಳೂರು, ದಿನಾಂಕ 08.05.2024.
2. ವಿಶ್ವವಿದ್ಯಾನಿಲಯದ ಸಮಸಂಖ್ಯೆ ಅಧಿಸೂಚನೆ ದಿನಾಂಕ 13.05.2024.
3. ತಜ್ಞರ ಸಮಿತಿ ರಚನೆಯ ವಿಶ್ವವಿದ್ಯಾನಿಲಯದ ಸಮಸಂಖ್ಯೆ ಅಧಿಸೂಚನೆ ದಿನಾಂಕ 18.05.2024.
4. ತಜ್ಞರ ಸಮಿತಿ ಸಲ್ಲಿಸಿದ ವರದಿ ದಿನಾಂಕ 23.04.2025.
5. ವಿಶ್ವವಿದ್ಯಾನಿಲಯದ ಸುತ್ತೋಲೆ ದಿನಾಂಕ 29.04.2025

******

ಉಲ್ಲೇಖಿತ (1)ರ ಸರ್ಕಾರದ ಆದೇಶಾನುಸಾರ, ಉಲ್ಲೇಖ(5)ರ ಸುತ್ತೋಲೆಯ ಮುಂದುವರಿಕೆಯಾಗಿ, ಈ ಮುಂದಿನ ಸ್ಪಷ್ಟೀಕರಣವನ್ನು ನೀಡಲಾಗಿದೆ.

2025-26ನೇ ಶೈಕ್ಷಣಿಕ ವರ್ಷದ ಸ್ನಾತಕ ಪದವಿಯ ಕಾರ್ಯಕ್ರಮದ ಮೂರು ಪ್ರಮುಖ ವಿಷಯಗಳಿಂದ ಐಚ್ಛಿಕ ಪತ್ರಿಕೆಗಳು/ಕೋರ್ಸ್‌ಗಳನ್ನು ನೀಡಲಾಗುತ್ತದೆ. ಒಬ್ಬ ವಿದ್ಯಾರ್ಥಿಯು ಒಂದು ವಿಷಯದಲ್ಲಿ ಒಂದಕ್ಕಿಂತ ಹೆಚ್ಚು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಂತಿಲ್ಲ. ಉದಾಹರಣೆಗೆ, ಭೌತಶಾಸ್ತ್ರ ವಿದ್ಯಾರ್ಥಿಗಳು ಒಂದು ಸೆಮಿಸ್ಟರ್‌ನಲ್ಲಿ ಎರಡು ಭೌತಶಾಸ್ತ್ರ ಐಚ್ಛಿಕ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವಂತಿಲ್ಲ. ಸಹಜವಾಗಿ, ಕಾಲೇಜು ಸಹ ಅಂತಹ ಆಯ್ಕೆಯನ್ನು ನೀಡಬಾರದೆಂದು ತಿಳಿಸಲಾಗಿದೆ.

ಮುಂದುವರಿದು, ವಿದ್ಯಾರ್ಥಿಯು 2025-26ನೇ ಸಾಲಿನ ವಿಷಯ ಚಾತುರ್ಮಾಸದಲ್ಲಿ (odd semester) ಮೇಜರ್ 1 ಮತ್ತು ಮೇಜರ್ 2ರ ಸಂಬಂಧ ಒಂದೊಂದು ಐಚ್ಛಿಕ ವಿಷಯಗಳನ್ನು ಆರಿಸಿಕೊಂಡರೆ, ಮುಂದಿನ ಸಮಚಾತುರ್ಮಾಸದಲ್ಲಿ (Even semester) ಮೇಜರ್ 3ರಿಂದ ಒಂದು ಐಚ್ಛಿಕ ವಿಷಯವನ್ನು ಆರಿಸಿಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ವಿದ್ಯಾರ್ಥಿಗಳು ಮೂರು ಮೇಜರ್‌ಗಳಿಂದ ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಲು ಆಯ್ಕೆ ಮಾಡಿಕೊಳ್ಳಲು ಅನುವು ಮಾಡಿಕೊಡುವಂತೆ ಪ್ರಾಂಶುಪಾಲರಿಗೆ ಈ ಮೂಲಕ ಸೂಚಿಸಲಾಗಿದೆ.

ಕುಲಸಚಿವರು 11/7/25
ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

**ಇವರಿಗೆ:**

1. ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ಮು.ತಿ.ನೋ.

2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರೊ.ಎಸ್.ರವಿ, NEP Nodal officer, ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
6. ಪ್ರೊ.ಎನ್.ನಾಗರಾಜು, ನಿರ್ದೇಶಕರು, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಯೋಜಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-**ಮೈಸೂರು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಈ ಸುತ್ತೋಲೆಯನ್ನು upload ಮಾಡುವಂತೆ ತಿಳಿಸಲಾಗಿದೆ.**
8. ಉಪಕುಲಸಚಿವರು (ಪ್ರಾಧಿಕಾರ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-**ಇವರಿಗೆ ಶೀಘ್ರವಾಗಿ ಅಧ್ಯಯನ ಮಂಡಳಿಗಳ ಸಭೆಗಳನ್ನು ಏರ್ಪಡಿಸುವ ಸಂಬಂಧ ಕ್ರಮವಹಿಸುವಂತೆ ತಿಳಿಸಲಾಗಿದೆ.**
9. ಉಪಕುಲಸಚಿವರು/ಸಹಾಯಕ ಕುಲಸಚಿವರು(ಸಾಮಾನ್ಯ/ಶೈಕ್ಷಣಿಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈವಿವಿ, ಮೈಸೂರು.
11. ಕಛೇರಿ ಪ್ರತಿ.